INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-8, Issue -03,May-June, 2026
Page No,75-88
Peer -Reviewed, Refereed Journal

# ಬೌದ್ಧ ತತ್ವಗಳಲ್ಲಿ ಉತ್ತಮ ಆಡಳಿತ ಕುರಿತ ವಿಶ್ಲೇಷಣೆ

**ಡಾ.ಎಂ.ರಾಚಪ್ಪಾಜಿ.**[1]

**ಸಾರಾಂಶ:** ಬೌದ್ಧ ರಾಜಕೀಯ ತತ್ವಶಾಸ್ತ್ರವು ರಾಜ್ಯವನ್ನು ದೈವಿಕ ಸೃಷ್ಟಿಯ ಫಲವೆಂದು ಪರಿಗಣಿಸದೆ, ಮಾನವರ ಸಾಮಾಜಿಕ ಅಗತ್ಯತೆ ಮತ್ತು ಪರಸ್ಪರ ಒಪ್ಪಂದದ ಆಧಾರದ ಮೇಲೆ ರೂಪುಗೊಂಡ ಸಂಸ್ಥೆಯಾಗಿದೆ ಎಂಬುದನ್ನು ಸಾದರಪಡಿಸುತ್ತದೆ. ಸುತ್ತ ಪಿಟಕದ ಅಗ್ಗಣ್ಣ ಸುತ್ತದಲ್ಲಿ ರಾಜ್ಯದ ಉಗಮವನ್ನು ಸಾಮಾಜಿಕ ಒಪ್ಪಂದದ ಫಲವಾಗಿ ನಿರೂಪಿಸಲಾಗಿದ್ದು, ಅದು ಜನರು ಅರಾಜಕತೆ ಮತ್ತು ಅನ್ಯಾಯವನ್ನು ತಡೆಯಲು ತಮ್ಮೊಳಗಿಂದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿ ಆಡಳಿತದ ಅಧಿಕಾರವನ್ನು ನೀಡಿರುವುದು ಉಲ್ಲೇಖಿತಗೊಂಡಿದೆ. ಈ ಮೂಲಕ ಬೌದ್ಧಧಮ್ಮವು ಜನಸಮ್ಮತಿ ಆಧಾರಿತ ರಾಜ್ಯದ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತದೆ. ಭೂಪ್ರದೇಶ, ಆಡಳಿತಗಾರ, ದಂಡನಾಧಿಕಾರ, ಸಶಸ್ತ್ರ ಪಡೆ, ಶಾಸಕಾಂಗ ಅಧಿಕಾರ, ನ್ಯಾಯಸಮ್ಮತತೆ ಮತ್ತು ನೈತಿಕ ಆರ್ಥಿಕ ವ್ಯವಸ್ಥೆಯಾಗಿರುತ್ತದೆ. ಒಬ್ಬ ರಾಜನು ರಾಜ್ಯದ ಮುಖ್ಯಸ್ಥನಾಗಿದ್ದರೂ, ಅವನ ಅಧಿಕಾರವು ಧಮ್ಮ ಮತ್ತು ಕಾನೂನಿನ ಮಿತಿಗಳೊಳಗೆ ಕಾರ್ಯನಿರ್ವಹಿಸಬೇಕು. ಚಕ್ರವರ್ತಿ ರಾಜನ ಪರಿಕಲ್ಪನೆಯ ಮೂಲಕ ಬೌದ್ಧಧಮ್ಮವು ಧರ್ಮ, ನ್ಯಾಯ ಮತ್ತು ಜನಕಲ್ಯಾಣವನ್ನು ಆಧರಿಸಿದ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಜನರ ಜೀವ ಮತ್ತು ಆಸ್ತಿಯ ರಕ್ಷಣೆ, ಕಾನೂನು ಮತ್ತು ಸುವ್ಯವಸ್ಥೆಯ ಕಾಪಾಡುವಿಕೆ, ನ್ಯಾಯದ ಸ್ಥಾಪನೆ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವುದು ರಾಜ್ಯದ ಮುಖ್ಯ ಕರ್ತವ್ಯಗಳಾಗಿವೆ. ಬಡತನವು ಸಾಮಾಜಿಕ ದುರ್ಗುಣಗಳ ಮೂಲ ಕಾರಣವಾಗಿದ್ದು, ಉದ್ಯೋಗ ಸೃಷ್ಟಿ, ಕೃಷಿ ಮತ್ತು ವ್ಯಾಪಾರದ ಅಭಿವೃದ್ಧಿ ಹಾಗೂ ಸಂಪತ್ತಿನ ನ್ಯಾಯಯುತ ಹಂಚಿಕೆಯ ಮೂಲಕ ಅದನ್ನು ನಿವಾರಿಸಬೇಕು. ಆರ್ಥಿಕ ಅಭಿವೃದ್ಧಿಯು ನೈತಿಕತೆಯ ಆಧಾರದ ಮೇಲೆ ನಡೆಯಬೇಕು ಎಂಬುದನ್ನು ಬೌದ್ಧಧಮ್ಮ ಒತ್ತಿಹೇಳುತ್ತದೆ. ಯುದ್ಧದ ವಿಷಯದಲ್ಲಿ ಬೌದ್ಧಧಮ್ಮವು ಶಾಂತಿ ಮತ್ತು ಅಹಿಂಸೆಗೆ ಆದ್ಯತೆ ನೀಡಿದರೂ, ರಾಜ್ಯದ ರಕ್ಷಣೆಗಾಗಿ ಅನಿವಾರ್ಯ ಸಂದರ್ಭಗಳಲ್ಲಿ ಸಶಸ್ತ್ರ ಬಲ ಮತ್ತು ಯುದ್ಧದ ಅಗತ್ಯತೆಯನ್ನು ಒಪ್ಪಿಕೊಳ್ಳುತ್ತದೆ. ಆದರೆ ಯುದ್ಧವು ಕೇವಲ ರಕ್ಷಣಾತ್ಮಕ ಉದ್ದೇಶಕ್ಕಾಗಿ ಮಾತ್ರ ನಡೆಯಬೇಕು.

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

**ಪ್ರಮುಖ ಪದಗಳು:** ಬೌದ್ಧ ರಾಜಕೀಯ ತತ್ವಶಾಸ್ತ್ರ, ರಾಜ್ಯದ ಉಗಮ, ಸಾಮಾಜಿಕ ಒಪ್ಪಂದ ಸಿದ್ಧಾಂತ ಮಹಾಸಮ್ಮತ ಪರಿಕಲ್ಪನೆ, ಚಕ್ರವರ್ತಿ ರಾಜ, ಧರ್ಮರಾಜ್ಯ, ಕಾನೂನಿನ ಪ್ರಭುತ್ವ, ಜನಕಲ್ಯಾಣಕಾರಿ, ರಾಜ್ಯ, ನೈತಿಕ ಆರ್ಥಿಕತೆ, ಅಹಿಂಸೆ ಮತ್ತು ರಾಜ್ಯದ ರಕ್ಷಣೆ.

**ಪೀಠಿಕೆ:** ಮಾನವ ಸಮಾಜದ ಸಂಘಟಿತ ಜೀವನದಲ್ಲಿ ರಾಜ್ಯವು ಅತ್ಯಂತ ಪ್ರಮುಖ ಸಂಸ್ಥೆಯಾಗಿದೆ. ರಾಜ್ಯದ ಉಗಮ, ಸ್ವರೂಪ, ಅಧಿಕಾರ, ಆಡಳಿತ ವ್ಯವಸ್ಥೆ ಮತ್ತು ಜನರೊಂದಿಗೆ ಅದರ ಸಂಬಂಧಗಳ ಕುರಿತು ವಿಶ್ವದ ವಿವಿಧ ಧಾರ್ಮಿಕ ಹಾಗೂ ರಾಜಕೀಯ ಪರಂಪರೆಗಳು ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿವೆ. ಭಾರತೀಯ ರಾಜಕೀಯ ಚಿಂತನೆಯ ಇತಿಹಾಸದಲ್ಲಿ ಬೌದ್ಧಧಮ್ಮವು ಈ ವಿಷಯಗಳಿಗೆ ವಿಶಿಷ್ಟವಾದ ಮತ್ತು ಪ್ರಗತಿಪರವಾದ ದೃಷ್ಟಿಕೋನವನ್ನು ಹೊಂದಿರುತ್ತದೆ. ಈ ದೃಷ್ಟಿಕೋನವು ರಾಜ್ಯದ ಉಗಮದ ಬಗೆಗೆ ಪ್ರಾಚೀನ ಕಾಲಮಾನದಲ್ಲೇ ಒಂದು ತಾರ್ಕಿಕ ಮತ್ತು ಮಾನವಕೇಂದ್ರಿತ ವಿವರಣೆಯನ್ನು ನೀಡಿರುವುದರಿಂದ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಅಗ್ಗಣ್ಣ ಸುತ್ತ, ಚಕ್ಕವತ್ತಿ–ಸೀಹನಾದ ಸುತ್ತ ಹಾಗೂ ಇತರ ಬೌದ್ಧ ಪ್ರವಚನಗಳಲ್ಲಿ ರಾಜ್ಯ, ರಾಜತ್ವ, ಆಡಳಿತ, ನ್ಯಾಯ, ಆರ್ಥಿಕತೆ ಮತ್ತು ಕಾನೂನಿನ ಕುರಿತು ಮಹತ್ವದ ವಿಚಾರಗಳು ವ್ಯಕ್ತವಾಗಿರುತ್ತವೆ. ರಾಜ್ಯದ ಮೂಲ ಉದ್ದೇಶವು ಜನರ ಜೀವ, ಆಸ್ತಿ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವುದಾಗಿದೆ. ಅದೇ ಸಂದರ್ಭದಲ್ಲಿ ನ್ಯಾಯಯುತ ಆಡಳಿತ, ಸಾಮಾಜಿಕ ಸುವ್ಯವಸ್ಥೆ, ಬಡತನ ನಿರ್ಮೂಲನೆ ಮತ್ತು ಜನಕಲ್ಯಾಣವನ್ನು ಸಾಧಿಸುವ ಜವಾಬ್ದಾರಿಯೂ ರಾಜ್ಯದ ಮೇಲಿದೆ. ದಿಘಾ ನಿಕಾಯದಲ್ಲಿನ ಅಗ್ಗಣ್ಣ ಸುತ್ತವು ರಾಜ್ಯದ ಉಗಮವನ್ನು ಸಮಾಜದಲ್ಲಿ ಅರಾಜಕತೆ, ಅನ್ಯಾಯ ಮತ್ತು ಅಪರಾಧಗಳು ಹೆಚ್ಚಾದಾಗ ಜನರು ತಮ್ಮೊಳಗಿಂದ ಒಬ್ಬ ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿ, ನ್ಯಾಯವನ್ನು ಕಾಪಾಡುವ ಹಾಗೂ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಅವನಿಗೆ ವಹಿಸಿದರು. ಇದಕ್ಕೆ ಪ್ರತಿಯಾಗಿ ಜನರು ಅವನಿಗೆ ತಮ್ಮ ಉತ್ಪಾದನೆಯ ಒಂದು ಭಾಗವನ್ನು ನೀಡಲು ಒಪ್ಪಿಕೊಂಡರು. ಹೀಗೆ ಜನರ ಒಪ್ಪಿಗೆಯ ಆಧಾರದ ಮೇಲೆ ರಾಜತ್ವ ಮತ್ತು ರಾಜ್ಯ ವ್ಯವಸ್ಥೆ ಉದ್ಭವಿಸಿತು ಎಂಬ ಕಲ್ಪನೆ ಇಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಕೋನವು ರಾಜ್ಯವನ್ನು ದೈವಿಕ ಸಂಸ್ಥೆಯಾಗಿ ಅಲ್ಲದೆ, ಜನರ ಅಗತ್ಯತೆ ಮತ್ತು ಸಾಮಾಜಿಕ ಒಪ್ಪಂದದ ಫಲವಾಗಿ ರೂಪುಗೊಂಡ ಮಾನವ ನಿರ್ಮಿತ ಸಂಸ್ಥೆಯಾಗಿ ಪರಿಗಣಿಸುತ್ತದೆ.

ರಾಜ್ಯವು ದೈವಿಕ ಸೃಷ್ಟಿಯ ಫಲವಲ್ಲ; ಅದು ಮಾನವರ ಸಾಮಾಜಿಕ ಅಗತ್ಯತೆ ಮತ್ತು ಪರಸ್ಪರ ಒಪ್ಪಂದದ ಪರಿಣಾಮವಾಗಿ ಉಂಟಾದ ಸಂಸ್ಥೆಯಾಗಿದೆ. ಆರಂಭದಲ್ಲಿ ಮಾನವರು ಸ್ವಾಭಾವಿಕವಾಗಿ, ಯಾವುದೇ ಆಡಳಿತ ಅಥವಾ ಕಾನೂನುಗಳಿಲ್ಲದೆ ಜೀವನ ನಡೆಸುತ್ತಿದ್ದರು. ಆದರೆ ಕಾಲಕ್ರಮೇಣ ಲೋಭ, ಸ್ವಾರ್ಥ, ಕಳ್ಳತನ, ಹಿಂಸೆ ಮತ್ತು ಅನ್ಯಾಯಗಳು ಹೆಚ್ಚಾದಾಗ ಸಮಾಜದಲ್ಲಿ ಅರಾಜಕತೆ ಉಂಟಾಯಿತು.

ಈ ಅರಾಜಕತೆಯನ್ನು ನಿವಾರಿಸಲು ಜನರು ತಮ್ಮೊಳಗಿಂದ ಒಬ್ಬ ಸದ್ಗುಣಸಂಪನ್ನ, ನ್ಯಾಯಪ್ರಿಯ ಮತ್ತು ಸಮರ್ಥ ವ್ಯಕ್ತಿಯನ್ನು ಆಯ್ಕೆ ಮಾಡಿ, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಅವನಿಗೆ ವಹಿಸಿದರು. ಪ್ರತಿಯಾಗಿ ಜನರು ತಮ್ಮ ಉತ್ಪಾದನೆಯ ಒಂದು ಭಾಗವನ್ನು ಅವನಿಗೆ ನೀಡಲು ಒಪ್ಪಿಕೊಂಡರು. ಜನರಿಂದ ಆಯ್ಕೆಯಾದ ಕಾರಣ ಅವನನ್ನು ಮಹಾಸಮ್ಮತ – ಎಲ್ಲರಿಂದ ಸಮ್ಮತಿಸಲ್ಪಟ್ಟವನು ಎಂದು ಕರೆಯಲಾಯಿತು. ಇದೇ ಮೊದಲ ರಾಜನ ಉದಯಕ್ಕೆ ಕಾರಣವಾಯಿತು.

ರಾಜ್ಯದ ಉಗಮವು ಸಾಮಾಜಿಕ ಅಗತ್ಯತೆ ಮತ್ತು ಜನರ ಪರಸ್ಪರ ಒಪ್ಪಂದದ ಫಲವಾಗಿದೆ. ರಾಜನ ಅಧಿಕಾರವು ಜನರ ಸಮ್ಮತಿಯಿಂದ ಹುಟ್ಟಿಕೊಳ್ಳುತ್ತದೆ; ಅದು ದೇವರಿಂದ ಪ್ರದತ್ತವಾದುದಲ್ಲ. ರಾಜ್ಯದ ಉದ್ದೇಶವು ನ್ಯಾಯ, ಶಾಂತಿ ಮತ್ತು ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವುದಾಗಿದೆ. ಆಡಳಿತವು ಧರ್ಮ, ನೀತಿ ಮತ್ತು ಜನಕಲ್ಯಾಣದ ತತ್ವಗಳ ಮೇಲೆ ಆಧಾರಿತವಾಗಿರಬೇಕು. ಜನರ ಕಲ್ಯಾಣವನ್ನು ಸಾಧಿಸದ ಆಡಳಿತವು ತನ್ನ ನೈತಿಕ ನ್ಯಾಯಸಮ್ಮತತೆಯನ್ನು ಕಳೆದುಕೊಳ್ಳುತ್ತದೆ. ರಾಜ್ಯವನ್ನು ಜನರ ಹಿತಕ್ಕಾಗಿ ರೂಪುಗೊಂಡ ಸಾಮಾಜಿಕ ಸಂಸ್ಥೆಯಾಗಿ ಪರಿಗಣಿಸುತ್ತವೆ.

ಪ್ರಾರಂಭಿಕ ಮಾನವ ಸಮಾಜವು ಸಾಮೂಹಿಕ ಅಥವಾ ಸಾಮಾನ್ಯ ಆಸ್ತಿಯ ತತ್ವದ ಮೇಲೆ ಆಧಾರಿತವಾಗಿತ್ತು. ಆ ಹಂತದಲ್ಲಿ ಸಾಮಾಜಿಕ ಸಂಬಂಧಗಳು ಸರಳವಾಗಿದ್ದು, ಖಾಸಗಿ ಸ್ವಾಮ್ಯದ ಕಲ್ಪನೆ ಹೆಚ್ಚು ಬೆಳವಣಿಗೆ ಹೊಂದಿರಲಿಲ್ಲ. ಆದರೆ, ಕಾಲಕ್ರಮೇಣ ಸಮಾಜದಲ್ಲಿ ಲೋಭ, ಸ್ವಾರ್ಥ, ಸ್ವಾಮಿತ್ವದ ಮನೋಭಾವ ಮತ್ತು ಸಂಪತ್ತಿನ ಅಸಮಾನ ಹಂಚಿಕೆ ಬೆಳೆಯತೊಡಗಿದವು. ಇದರ ಪರಿಣಾಮವಾಗಿ ಕಳ್ಳತನ, ಹಿಂಸೆ, ಮೋಸ ಮತ್ತು ಇತರ ಸಾಮಾಜಿಕ ದುರ್ಗುಣಗಳು ಹೆಚ್ಚಾಗಿ, ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆಯುಂಟಾಯಿತು. ಈ ಬದಲಾವಣೆಗಳೊಂದಿಗೆ ಖಾಸಗಿ ಆಸ್ತಿಯ ಪರಿಕಲ್ಪನೆ ಬಲಗೊಂಡು, ಅದನ್ನು ರಕ್ಷಿಸುವ ಅಗತ್ಯವುಂಟಾಯಿತು. ಸಾಮಾಜಿಕ ಜೀವನವನ್ನು ನಿಯಂತ್ರಿಸಲು, ನ್ಯಾಯವನ್ನು ಕಾಪಾಡಲು ಮತ್ತು ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸಲು ಒಂದು ಸಂಘಟಿತ ಆಡಳಿತ ವ್ಯವಸ್ಥೆಯ ಅವಶ್ಯಕತೆ ಕಂಡುಬಂದಿತು. ಈ ಸಂದರ್ಭದಲ್ಲಿ ಜನರು ತಮ್ಮೊಳಗಿಂದ ಒಬ್ಬ ಸಮರ್ಥ, ನ್ಯಾಯನಿಷ್ಠ ಮತ್ತು ಗೌರವಾನ್ವಿತ ವ್ಯಕ್ತಿಯನ್ನು ಆಯ್ಕೆ ಮಾಡಿ, ಸಮಾಜದ ಪರವಾಗಿ ಆಡಳಿತ ನಡೆಸುವ ಅಧಿಕಾರವನ್ನು ಅವನಿಗೆ ನೀಡಿದರು.

ಯಾವುದೇ ಒಂದು ರಾಜ್ಯವು ನಿರ್ದಿಷ್ಟ ಭೂಪ್ರದೇಶವನ್ನು ಹೊಂದಿರಬೇಕು. ಆ ಪ್ರದೇಶದ ಮೇಲೆ ರಾಜ್ಯದ ಅಧಿಕಾರವು ಮಾನ್ಯವಾಗಿರಬೇಕು ಮತ್ತು ಅದರ ಗಡಿಗಳೊಳಗೆ ಕಾನೂನು ಹಾಗೂ ಆಡಳಿತ ವ್ಯವಸ್ಥೆ ಜಾರಿಯಲ್ಲಿರಬೇಕು. ಭೂಪ್ರದೇಶವಿಲ್ಲದೆ ರಾಜ್ಯದ ಅಸ್ತಿತ್ವವನ್ನು ಕಲ್ಪಿಸಲಾಗುವುದಿಲ್ಲ. ರಾಜ್ಯದ ಆಡಳಿತದ ಮುಖ್ಯಸ್ಥನಾಗಿ ರಾಜ ಅಥವಾ ಆಡಳಿತಗಾರನ ಅಸ್ತಿತ್ವ ಅಗತ್ಯವಾಗಿದೆ. ಬೌದ್ಧ ಸಾಹಿತ್ಯದಲ್ಲಿ ಇಂತಹ ಆಡಳಿತಗಾರನನ್ನು ಮಹಾಸಮ್ಮತ ಎಂದು ಕರೆಯಲಾಗಿದೆ. ಅವನು ಸರ್ವಜನರ ಸಮ್ಮತಿಯಿಂದ

ಅಧಿಕಾರವನ್ನು ಪಡೆದವನಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ನ್ಯಾಯವನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾನೆ.

ರಾಜ್ಯವು ಕಾನೂನು ಉಲ್ಲಂಘಿಸುವವರನ್ನು ಶಿಕ್ಷಿಸುವ ಅಧಿಕಾರವನ್ನು ಹೊಂದಿರಬೇಕು. ಅಪರಾಧಗಳನ್ನು ತಡೆಯಲು ಮತ್ತು ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡಲು ದಂಡನಾತ್ಮಕ ಅಧಿಕಾರವು ಅಗತ್ಯವೆಂದು ಬೌದ್ಧ ರಾಜಕೀಯ ಚಿಂತನೆ ಒಪ್ಪಿಕೊಳ್ಳುತ್ತದೆ. ಆದರೆ ಈ ಶಿಕ್ಷೆಯು ಧರ್ಮ ಮತ್ತು ನ್ಯಾಯದ ಮಿತಿಯೊಳಗಿರಬೇಕು. ಆಂತರಿಕ ಶಾಂತಿಯನ್ನು ಕಾಪಾಡಲು ಹಾಗೂ ಬಾಹ್ಯ ಶತ್ರುಗಳಿಂದ ರಾಜ್ಯವನ್ನು ರಕ್ಷಿಸಲು ಸಶಸ್ತ್ರ ಪಡೆಗಳ ಅವಶ್ಯಕತೆಯಿದೆ. ಆದ್ದರಿಂದ ರಕ್ಷಣಾ ವ್ಯವಸ್ಥೆ ಮತ್ತು ಸೈನಿಕ ಸಂಘಟನೆಯು ರಾಜ್ಯದ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ರಾಜ್ಯವು ನಿಯಮಗಳು, ಕಾನೂನುಗಳು ಮತ್ತು ಆಡಳಿತಾತ್ಮಕ ಆದೇಶಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿರಬೇಕು. ಈ ಅಧಿಕಾರದ ಮೂಲಕವೇ ಸಮಾಜದ ವಿವಿಧ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ಸಾಧ್ಯವಾಗುತ್ತದೆ. ರಾಜ್ಯದ ಅಧಿಕಾರವು ಕೇವಲ ಬಲಪ್ರಯೋಗದ ಮೇಲೆ ಆಧಾರಿತವಾಗಿರಬಾರದು; ಅದು ಜನರಿಂದ ಅಂಗೀಕರಿಸಲ್ಪಟ್ಟ ಮತ್ತು ನೈತಿಕವಾಗಿ ಸಮರ್ಥಿತವಾಗಿರಬೇಕು. ಬೌದ್ಧ ದೃಷ್ಟಿಯಲ್ಲಿ ಆಡಳಿತದ ನ್ಯಾಯಸಮ್ಮತತೆಯು ಜನರ ವಿಶ್ವಾಸ, ಧರ್ಮಾನುಸಾರ ಆಡಳಿತ ಮತ್ತು ಜನಕಲ್ಯಾಣದ ಮೇಲೆ ಅವಲಂಬಿತವಾಗಿರುತ್ತದೆ.

ಬೌದ್ಧಧಮ್ಮವು ಆರ್ಥಿಕ ಚಟುವಟಿಕೆಗಳು ಧರ್ಮ, ನೈತಿಕತೆ, ಸಮಾನತೆ ಮತ್ತು ಜನಕಲ್ಯಾಣದ ತತ್ವಗಳಿಗೆ ಅನುಗುಣವಾಗಿರಬೇಕು ಎಂದು ಪ್ರತಿಪಾದಿಸುತ್ತದೆ. ಆರ್ಥಿಕ ವ್ಯವಸ್ಥೆಯ ಉದ್ದೇಶ ಕೇವಲ ಸಂಪತ್ತಿನ ಸಂಗ್ರಹವಲ್ಲ; ಸಮಾಜದ ಸಮಗ್ರ ಹಿತವನ್ನು ಸಾಧಿಸುವುದಾಗಿರಬೇಕು. ಭೂಪ್ರದೇಶ, ಆಡಳಿತಗಾರ, ದಂಡನಾಧಿಕಾರ, ರಕ್ಷಣಾ ವ್ಯವಸ್ಥೆ, ಕಾನೂನು ರೂಪಿಸುವ ಅಧಿಕಾರ, ನ್ಯಾಯಸಮ್ಮತತೆ ಮತ್ತು ನೈತಿಕ ಆರ್ಥಿಕ ವ್ಯವಸ್ಥೆಯು ಸೇರಿ ರಾಜ್ಯದ ಸಮಗ್ರ ಸ್ವರೂಪವನ್ನು ನಿರ್ಮಿಸುತ್ತವೆ. ರಾಜ್ಯವು ಕೇವಲ ಅಧಿಕಾರದ ಸಂಸ್ಥೆಯಲ್ಲ; ಅದು ಧರ್ಮ, ನ್ಯಾಯ ಮತ್ತು ಜನಕಲ್ಯಾಣವನ್ನು ಸಾಧಿಸುವ ಸಾಮಾಜಿಕ ಸಂಸ್ಥೆಯಾಗಿದೆ. ರಾಜನು ರಾಜ್ಯದ ಮುಖ್ಯಸ್ಥನಾಗಿದ್ದು, ರಾಜ್ಯದ ಆಡಳಿತ, ನ್ಯಾಯ ಮತ್ತು ಭದ್ರತೆಯ ಜವಾಬ್ದಾರಿಯನ್ನು ಹೊತ್ತಿರುವ ಕೇಂದ್ರ ಅಧಿಕಾರಿಯಾಗಿದ್ದಾನೆ. ಬೌದ್ಧಧಮ್ಮವು ಒಂದು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಪ್ರತಿಪಾದಿಸಿ, ಈ ಕೇಂದ್ರೀಕರಣವು ನಿರಂಕುಶ ಅಧಿಕಾರಕ್ಕಾಗಿ ಅಲ್ಲ; ಧರ್ಮ, ನ್ಯಾಯ ಮತ್ತು ಜನಕಲ್ಯಾಣವನ್ನು ಸಾಧಿಸುವ ಉದ್ದೇಶಕ್ಕಾಗಿ ರೂಪುಗೊಂಡ ವ್ಯವಸ್ಥೆಯಾಗಿದೆ. ಗುರು ಬುದ್ಧರ ಕಾಲಮಾನದಲ್ಲಿ ಉತ್ತರ ಭಾರತದಲ್ಲಿ ಗಣರಾಜ್ಯಗಳು (ಗಣ–ಸಂಘಗಳು) ಮತ್ತು ರಾಜಪ್ರಭುತ್ವ ರಾಜ್ಯಗಳು ಎರಡೂ ಅಸ್ತಿತ್ವದಲ್ಲಿದ್ದವು. ಆದಾಗ್ಯೂ, ಆ ಕಾಲಮಾನದ ರಾಜಕೀಯ ಬೆಳವಣಿಗೆಗಳು ಗಣರಾಜ್ಯಗಳಿಗಿಂತ ಬಲಿಷ್ಠ ರಾಜಪ್ರಭುತ್ವ ರಾಜ್ಯಗಳ ಉದಯಕ್ಕೆ ಕಾರಣವಾಗಿದ್ದವು. ಮಗಧ ಮತ್ತು ಕೋಸಲದಂತಹ ರಾಜ್ಯಗಳು

ರಾಜಕೀಯವಾಗಿ ಪ್ರಬಲವಾಗಿದ್ದವು. ಆಡಳಿತದ ಕೇಂದ್ರಬಿಂದುವಾಗಿ ರಾಜನನ್ನು ಹೆಚ್ಚು ಪರಿಗಣಿಸಿರುವುದು ಕಂಡುಬರುತ್ತದೆ. ಆದರೆ, ಈ ರಾಜಪ್ರಭುತ್ವವು ದೈವಿಕ ಹಕ್ಕಿನ ಆಧಾರದ ಮೇಲೆ ಅಲ್ಲ; ಜನಸಮ್ಮತಿ ಮತ್ತು ಧರ್ಮಾನುಸಾರ ಆಡಳಿತದ ಆಧಾರದ ಮೇಲೆ ಸಮರ್ಥಿಸಲ್ಪಟ್ಟಿದೆ. ಆದರ್ಶ ಆಡಳಿತಗಾರನಾಗಿ ಚಕ್ರವರ್ತಿ ರಾಜನ ಪರಿಕಲ್ಪನೆಯನ್ನು ಮುಂದಿಡುತ್ತದೆ. ಚಕ್ರವರ್ತಿ ರಾಜನು ಕೇವಲ ವಿಜಯಶಾಲಿ ದೊರೆಯಲ್ಲ; ಧರ್ಮದ ಆಧಾರದ ಮೇಲೆ ಆಡಳಿತ ನಡೆಸುವ, ಪ್ರಜೆಗಳ ಹಿತವನ್ನು ಕಾಪಾಡುವ ಮತ್ತು ವಿವಿಧ ಪ್ರದೇಶಗಳನ್ನು ಒಂದು ರಾಜಕೀಯ ವ್ಯವಸ್ಥೆಯ ಅಡಿಯಲ್ಲಿ ಸಂಘಟಿಸುವ ಆಡಳಿತಗಾರನಾಗಿದ್ದಾನೆ. ಉತ್ತರ ಭಾರತವು ಅನೇಕ ಸಣ್ಣ ರಾಜ್ಯಗಳು ಮತ್ತು ಗಣರಾಜ್ಯಗಳಾಗಿ ವಿಭಜಿತವಾಗಿತ್ತು. ಈ ಪರಿಸ್ಥಿತಿಯಲ್ಲಿ ರಾಜಕೀಯ ಸ್ಥಿರತೆ, ಕಾನೂನು ಸುವ್ಯವಸ್ಥೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಒಂದು ವಿಶಾಲ ಹಾಗೂ ಸಮನ್ವಯಿತ ಆಡಳಿತ ವ್ಯವಸ್ಥೆಯ ಅಗತ್ಯತೆಯನ್ನು ಬೌದ್ಧ ಚಿಂತನೆಯು ಒತ್ತಿಹೇಳುತ್ತದೆ. ಈ ಕಾರಣದಿಂದ ಚಕ್ರವರ್ತಿ ರಾಜನ ನೇತೃತ್ವದ ಏಕೀಕೃತ ಆಡಳಿತ ವ್ಯವಸ್ಥೆಯನ್ನು ಆದರ್ಶವಾಗಿ ಚಿತ್ರಿಸಲಾಗಿದೆ. ಬೌದ್ಧ ರಾಜ್ಯ ಸಿದ್ಧಾಂತದಲ್ಲಿ ಕೆಲವು ಪ್ರಮುಖ ಅಧಿಕಾರಗಳು ಕೇಂದ್ರ ಆಡಳಿತದ ಅಧೀನದಲ್ಲಿರಬೇಕು ಎಂದು ಸೂಚಿಸಲಾಗಿದೆ. ಭೂಮಿಯ ಮೇಲಿನ ಪರಮಾಧಿಕಾರ ಮತ್ತು ಅದರ ನಿಯಂತ್ರಣ, ನ್ಯಾಯಾಂಗ ವ್ಯವಸ್ಥೆಯ ನಿರ್ವಹಣೆ, ಕಾನೂನು ಮತ್ತು ಆಡಳಿತಾತ್ಮಕ ನಿಯಮಗಳ ಜಾರಿ, ಸಾರ್ವಜನಿಕ ಸುವ್ಯವಸ್ಥೆ ಮತ್ತು ಭದ್ರತೆಯ ಕಾಪಾಡುವಿಕೆ, ಆರ್ಥಿಕ ವ್ಯವಸ್ಥೆಯ ಮೇಲ್ವಿಚಾರಣೆ. ಆದಾಗ್ಯೂ, ಈ ಅಧಿಕಾರಗಳು ವೈಯಕ್ತಿಕ ಲಾಭಕ್ಕಾಗಿ ಬಳಸಲ್ಪಡಬಾರದು. ರಾಜನು ಧರ್ಮರಾಜನಾಗಿ ವರ್ತಿಸಬೇಕು; ಅಂದರೆ ಧರ್ಮ, ನ್ಯಾಯ, ಕರುಣೆ ಮತ್ತು ಜನಕಲ್ಯಾಣದ ತತ್ವಗಳ ಆಧಾರದ ಮೇಲೆ ಆಡಳಿತ ನಡೆಸಬೇಕು. ರಾಜನ ನೇತೃತ್ವದ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಪ್ರತಿಪಾದಿಸಿದರೂ, ಅದು ನಿರಂಕುಶ ರಾಜಪ್ರಭುತ್ವವನ್ನು ಸಮರ್ಥಿಸುವುದಿಲ್ಲ. ಬದಲಾಗಿ, ಧರ್ಮದ ನಿಯಂತ್ರಣದಲ್ಲಿರುವ, ಜನಕಲ್ಯಾಣವನ್ನು ಗುರಿಯಾಗಿಟ್ಟುಕೊಂಡ, ನ್ಯಾಯಸಮ್ಮತ ಮತ್ತು ನೈತಿಕ ಆಡಳಿತವನ್ನು ಒತ್ತಿಹೇಳುತ್ತದೆ. ಚಕ್ರವರ್ತಿ ರಾಜನ ಪರಿಕಲ್ಪನೆಯ ಮೂಲಕ ಬೌದ್ಧಧರ್ಮವು ರಾಜಕೀಯ ಏಕತೆ, ಸಾಮಾಜಿಕ ಸ್ಥಿರತೆ ಮತ್ತು ನೈತಿಕ ಆಡಳಿತದ ಆದರ್ಶವನ್ನು ಪ್ರತಿಪಾದಿಸುತ್ತದೆ. ಬೌದ್ಧ ರಾಜಕೀಯ ಚಿಂತನೆಗಳಲ್ಲಿ ರಾಜನು ಕೇವಲ ಅಧಿಕಾರದ ಕೇಂದ್ರವಾಗಿರದೆ, ಜನರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುವ ನೈತಿಕ ನಾಯಕನಾಗಿರಬೇಕು ಎಂದು ಪ್ರತಿಪಾದಿಸಲಾಗಿದೆ. ಆದರ್ಶ ರಾಜನ ಗುಣಗಳು ಆಡಳಿತದ ಯಶಸ್ಸು, ರಾಜ್ಯದ ಸ್ಥಿರತೆ ಮತ್ತು ಪ್ರಜೆಗಳ ಹಿತವನ್ನು ಖಚಿತಪಡಿಸುತ್ತವೆ. ಆಡಳಿತಗಾರನು ಉತ್ತಮ ಹೆಸರು ಮತ್ತು ಗೌರವವನ್ನು ಗಳಿಸಿರಬೇಕು. ಅವನ ಖ್ಯಾತಿಯು ನ್ಯಾಯ, ಪ್ರಾಮಾಣಿಕತೆ ಮತ್ತು ಜನಸೇವೆಯ ಆಧಾರದ ಮೇಲೆ ನಿರ್ಮಾಣವಾಗಿರಬೇಕು. ಉತ್ತಮ ಖ್ಯಾತಿಯು ಪ್ರಜೆಗಳಲ್ಲಿ ವಿಶ್ವಾಸವನ್ನು ಮೂಡಿಸುತ್ತದೆ.

ರಾಜನು ರಾಜ್ಯದ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಸಮೃದ್ಧ ಆರ್ಥಿಕ ವ್ಯವಸ್ಥೆಯು ಜನರ ಜೀವನಮಟ್ಟವನ್ನು ಸುಧಾರಿಸುವುದರ ಜೊತೆಗೆ ರಾಜ್ಯದ ಸ್ಥಿರತೆಯನ್ನು ಕಾಪಾಡುತ್ತದೆ. ಬೌದ್ಧಧರ್ಮವು ದಾರಿದ್ರ್ಯವನ್ನು ಅನೇಕ ಸಾಮಾಜಿಕ ಸಮಸ್ಯೆಗಳ ಮೂಲವೆಂದು ಪರಿಗಣಿಸುತ್ತದೆ. ರಾಜ್ಯದ

ಭದ್ರತೆಗಾಗಿ ಸೈನಿಕ ಶಕ್ತಿ ಅಗತ್ಯವಾಗಿದೆ. ಬಾಹ್ಯ ಆಕ್ರಮಣಗಳಿಂದ ರಾಜ್ಯವನ್ನು ರಕ್ಷಿಸಲು ಮತ್ತು ಆಂತರಿಕ ಸುವ್ಯವಸ್ಥೆಯನ್ನು ಕಾಪಾಡಲು ಸಮರ್ಥ ರಕ್ಷಣಾ ವ್ಯವಸ್ಥೆ ಇರಬೇಕು. ಆದರೆ ಬೌದ್ಧ ದೃಷ್ಟಿಯಲ್ಲಿ ಈ ಶಕ್ತಿಯನ್ನು ಆಕ್ರಮಣಕ್ಕಾಗಿ ಅಲ್ಲ, ರಕ್ಷಣೆಗೆ ಬಳಸಬೇಕು. ಆಡಳಿತಗಾರನು ಜ್ಞಾನಿಗಳಾದ, ಅನುಭವಿಗಳಾದ ಮತ್ತು ನೈತಿಕತೆಯನ್ನು ಪಾಲಿಸುವ ಸಲಹೆಗಾರರನ್ನು ಹೊಂದಿರಬೇಕು. ಸೂಕ್ತ ಸಲಹೆಗಳು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗುತ್ತವೆ. ಬುದ್ಧರು ಸಹ ಉತ್ತಮ ಸ್ನೇಹಿತರು ಮತ್ತು ಸಲಹೆಗಾರರ ಮಹತ್ವವನ್ನು ಒತ್ತಿಹೇಳಿದ್ದಾನೆ. ರಾಜನು ಇತರ ರಾಜ್ಯಗಳು ಮತ್ತು ಆಡಳಿತಗಾರರೊಂದಿಗೆ ಸ್ನೇಹಪರ ಹಾಗೂ ವಿವೇಕಯುತ ಸಂಬಂಧಗಳನ್ನು ಬೆಳೆಸುವ ಸಾಮರ್ಥ್ಯವನ್ನು ಹೊಂದಿರಬೇಕು. ರಾಜತಾಂತ್ರಿಕ ಕೌಶಲ್ಯವು ಯುದ್ಧಗಳನ್ನು ತಪ್ಪಿಸಿ ಶಾಂತಿ ಮತ್ತು ಸಹಕಾರವನ್ನು ಉತ್ತೇಜಿಸುತ್ತದೆ. ಆಡಳಿತಗಾರನ ವ್ಯಕ್ತಿತ್ವವು ಅವನ ಆಡಳಿತದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಸತ್ಯನಿಷ್ಠೆ, ಆತ್ಮಸಂಯಮ, ಕರುಣೆ, ಧೈರ್ಯ ಮತ್ತು ನ್ಯಾಯಪ್ರಜ್ಞೆ ಉತ್ತಮ ವ್ಯಕ್ತಿತ್ವದ ಲಕ್ಷಣಗಳಾಗಿವೆ. ಬೌದ್ಧಧಮ್ಮದಲ್ಲಿ ನೈತಿಕ ವ್ಯಕ್ತಿತ್ವಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ರಾಜನು ತನ್ನ ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಣಬೇಕು. ಅವರ ದುಃಖ–ದುಮ್ಮಾನಗಳಿಗೆ ಸ್ಪಂದಿಸಿ, ಅವರ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸಬೇಕು. ಈ ಕಾರಣದಿಂದ ಬೌದ್ಧ ಸಾಹಿತ್ಯದಲ್ಲಿ ರಾಜನನ್ನು ಕೆಲವೊಮ್ಮೆ ಪ್ರಜಾಪಿತ ಎಂಬ ಅರ್ಥದಲ್ಲಿ ಚಿತ್ರಿಸಲಾಗಿದೆ. ಆಡಳಿತಗಾರನು ತನ್ನ ದೇಶದ ಅಭಿವೃದ್ಧಿ ಮತ್ತು ಭದ್ರತೆಯ ಬಗ್ಗೆ ನಿಷ್ಠೆ ಹೊಂದಿರಬೇಕು. ಜೊತೆಗೆ ಜನರ ವಿಶ್ವಾಸ ಮತ್ತು ಬೆಂಬಲವನ್ನು ಗಳಿಸಿರಬೇಕು. ಜನಪ್ರಿಯತೆಯು ಕೇವಲ ಪ್ರಚಾರದಿಂದ ಅಲ್ಲ, ಉತ್ತಮ ಆಡಳಿತದಿಂದ ಬರಬೇಕು. ರಾಜನು ಆಡಳಿತಾತ್ಮಕ ಸಾಮರ್ಥ್ಯವನ್ನು ಹೊಂದಿರಬೇಕು. ನಿರ್ಧಾರ ಕೈಗೊಳ್ಳುವ ಕೌಶಲ್ಯ, ಸಮಯಪ್ರಜ್ಞೆ, ಕಾರ್ಯನಿಷ್ಠೆ ಮತ್ತು ಸ್ವಯಂ ಶಿಸ್ತು ಅವನಲ್ಲಿ ಇರಬೇಕು. ಶಿಸ್ತಿನ ಕೊರತೆಯು ಆಡಳಿತದ ದುರ್ಬಲತೆಗೆ ಕಾರಣವಾಗುತ್ತದೆ.

ಬೌದ್ಧ ರಾಜಕೀಯ ತತ್ವದಲ್ಲಿ ಜ್ಞಾನಕ್ಕೆ ಅತ್ಯುನ್ನತ ಸ್ಥಾನವಿದೆ. ಆಡಳಿತಗಾರನು ಶಿಕ್ಷಣ ಪಡೆದವನಾಗಿರಬೇಕು, ವಿವೇಕಶೀಲನಾಗಿರಬೇಕು ಮತ್ತು ದೂರದೃಷ್ಟಿಯನ್ನು ಹೊಂದಿರಬೇಕು. ಅಂತಃಪ್ರಜ್ಞೆಯು ಅವನಿಗೆ ಸಂಕೀರ್ಣ ಸಂದರ್ಭಗಳಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗುತ್ತದೆ. ಆದರ್ಶ ಆಡಳಿತಗಾರನು ಕೇವಲ ರಾಜಕೀಯ ಅಧಿಕಾರವನ್ನು ಹೊಂದಿರುವ ವ್ಯಕ್ತಿಯಲ್ಲ; ಅವನು ನೈತಿಕತೆ, ಜ್ಞಾನ, ಕರುಣೆ ಮತ್ತು ಜನಸೇವೆಯ ಮೌಲ್ಯಗಳನ್ನು ಅಳವಡಿಸಿಕೊಂಡ ನಾಯಕನಾಗಿರಬೇಕು. ಖ್ಯಾತಿ, ಆರ್ಥಿಕ ಸಾಮರ್ಥ್ಯ, ಸೈನಿಕ ಶಕ್ತಿ, ರಾಜತಾಂತ್ರಿಕತೆ, ಶಿಸ್ತು ಮತ್ತು ಬುದ್ಧಿವಂತಿಕೆಯಂತಹ ಗುಣಗಳು ಅವನ ಆಡಳಿತವನ್ನು ಪರಿಣಾಮಕಾರಿಯನ್ನಾಗಿಸಿದರೆ, ಕರುಣೆ, ವಾತ್ಸಲ್ಯ ಮತ್ತು ಧರ್ಮನಿಷ್ಠೆ ಅವನನ್ನು ಜನಪ್ರಿಯ ಮತ್ತು ನ್ಯಾಯಯುತ ಆಡಳಿತಗಾರನನ್ನಾಗಿ ರೂಪಿಸುತ್ತವೆ. ಈ ಗುಣಗಳ ಸಮನ್ವಯವೇ ಬೌದ್ಧ ಚಿಂತನೆಗಳಲ್ಲಿ ಧರ್ಮರಾಜ ಅಥವಾ ಚಕ್ರವರ್ತಿ ರಾಜನ ಆದರ್ಶವನ್ನು ಪ್ರತಿಬಿಂಬಿಸುತ್ತದೆ.

ಬೌದ್ಧ ರಾಜ್ಯ ಸಿದ್ಧಾಂತದ ಪ್ರಕಾರ, ರಾಜ್ಯವು ಮಾನವ ಸಮಾಜದ ಅಗತ್ಯತೆಗಳಿಂದ ಉದ್ಭವಿಸಿದ ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಸಮಾಜದಲ್ಲಿ ಶಾಂತಿ, ಭದ್ರತೆ ಮತ್ತು ನ್ಯಾಯವನ್ನು ಕಾಪಾಡುವ ಉದ್ದೇಶದಿಂದ ಜನರು ರಾಜ್ಯವನ್ನು ಸ್ಥಾಪಿಸಿದರು. ಆದ್ದರಿಂದ, ರಾಜ್ಯವು ಯಾವುದೇ ಆಡಳಿತ ರೂಪದಲ್ಲಿರಲ್ಲಿ ರಾಜಪ್ರಭುತ್ವ, ಗಣರಾಜ್ಯ ಅಥವಾ ಇತರ ಯಾವುದೇ ವ್ಯವಸ್ಥೆಯಾಗಿರಲ್ಲಿ ಅದರ ಅಸ್ತಿತ್ವದ ಮೂಲ ಉದ್ದೇಶಗಳನ್ನು ಈಡೇರಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ರಾಜ್ಯದ ಮೊದಲ ಮತ್ತು ಅತ್ಯಂತ ಪ್ರಮುಖ ಕರ್ತವ್ಯವೆಂದರೆ; ತನ್ನ ವ್ಯಾಪ್ತಿಯಲ್ಲಿರುವ ಜೀವಿಗಳ ಜೀವ ಮತ್ತು ಸುರಕ್ಷತೆಯನ್ನು ಕಾಪಾಡುವುದು. ಸಮಾಜದಲ್ಲಿ ಹಿಂಸೆ, ಅಪರಾಧ, ಅನ್ಯಾಯ ಮತ್ತು ಅರಾಜಕತೆಯನ್ನು ತಡೆಗಟ್ಟುವ ಮೂಲಕ ಪ್ರತಿಯೊಬ್ಬ ವ್ಯಕ್ತಿಗೂ ಸುರಕ್ಷಿತ ಜೀವನವನ್ನು ಒದಗಿಸುವುದು ರಾಜ್ಯದ ಮೂಲಭೂತ ಹೊಣೆಗಾರಿಕೆಯಾಗಿದೆ. ಜೀವವು ಅತ್ಯಂತ ಮೌಲ್ಯಯುತವಾದುದರಿಂದ, ಪ್ರಜೆಗಳ ಜೀವ, ಸ್ವಾತಂತ್ರ್ಯ ಮತ್ತು ಗೌರವವನ್ನು ರಕ್ಷಿಸುವುದು ಆಡಳಿತದ ಪ್ರಮುಖ ಧರ್ಮವಾಗಿದೆ. ರಾಜ್ಯವು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕು, ದುರ್ಬಲರನ್ನು ರಕ್ಷಿಸಬೇಕು, ಅಪರಾಧಗಳನ್ನು ನಿಯಂತ್ರಿಸಬೇಕು ಹಾಗೂ ಸಮಾಜದಲ್ಲಿ ಭಯಮುಕ್ತ ವಾತಾವರಣವನ್ನು ನಿರ್ಮಿಸಬೇಕು. ಜನರು ಶಾಂತಿ ಮತ್ತು ಭದ್ರತೆಯಿಂದ ಬದುಕಲು ಸಾಧ್ಯವಾಗುವ ಪರಿಸ್ಥಿತಿಯನ್ನು ಸೃಷ್ಟಿಸುವುದೇ ರಾಜ್ಯದ ಅಸ್ತಿತ್ವದ ಮೂಲ ಉದ್ದೇಶವಾಗಿದೆ. ಜನರ ಜೀವ ಮತ್ತು ಸುರಕ್ಷತೆಯನ್ನು ರಕ್ಷಿಸಲು ವಿಫಲವಾಗುವ ರಾಜ್ಯವು ತನ್ನ ಮೂಲ ಕರ್ತವ್ಯವನ್ನು ನಿರ್ವಹಿಸಲು ವಿಫಲವಾದಂತಾಗುತ್ತದೆ. ಆದ್ದರಿಂದ ಜೀವಿಗಳ ರಕ್ಷಣೆಯು ರಾಜ್ಯದ ಎಲ್ಲ ಕಾರ್ಯಗಳಿಗೂ ಆಧಾರವಾಗಿರುವ ಪ್ರಾಥಮಿಕ ಜವಾಬ್ದಾರಿಯಾಗಿದೆ. ರಾಜ್ಯವು ತನ್ನ ಪ್ರದೇಶದೊಳಗಿನ ಎಲ್ಲ ಜೀವಿಗಳ ರಕ್ಷಣೆ, ಭದ್ರತೆ ಮತ್ತು ಶಾಂತಿಯುತ ಬದುಕನ್ನು ಖಚಿತಪಡಿಸುವುದು. ಇದೇ ರಾಜ್ಯದ ನ್ಯಾಯಸಮ್ಮತತೆ ಮತ್ತು ಅಸ್ತಿತ್ವದ ಮೂಲಾಧಾರವಾಗಿದೆ.

ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು. ರಾಜ್ಯವು ತನ್ನ ವ್ಯಾಪ್ತಿಯೊಳಗೆ ಶಾಂತಿ, ಭದ್ರತೆ ಮತ್ತು ನ್ಯಾಯವನ್ನು ಸ್ಥಾಪಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಈ ಉದ್ದೇಶವನ್ನು ಸಾಧಿಸಲು ರಾಜ್ಯಕ್ಕೆ ದಂಡನಾಧಿಕಾರವನ್ನು ನೀಡಲಾಗಿದೆ. ಅಪರಾಧ, ಹಿಂಸೆ, ಕಳ್ಳತನ ಮತ್ತು ಸಮಾಜವಿರೋಧಿ ಚಟುವಟಿಕೆಗಳನ್ನು ತಡೆಗಟ್ಟಲು ಶಿಕ್ಷೆಯ ಅಧಿಕಾರವನ್ನು ನ್ಯಾಯಯುತವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವುದು ರಾಜ್ಯದ ಕರ್ತವ್ಯವಾಗಿದೆ. ಜನರು ಮತ್ತು ಆಡಳಿತಗಾರನ ನಡುವೆ ರೂಪುಗೊಂಡಿರುವ ಸಾಮಾಜಿಕ ಒಪ್ಪಂದದ ಮೂಲ ಉದ್ದೇಶವೇ ಸಮಾಜದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದಾಗಿದೆ. ಆದ್ದರಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ರಾಜ್ಯ ವಿಫಲವಾದರೆ, ಅದು ಜನರೊಂದಿಗೆ ಮಾಡಿಕೊಂಡಿರುವ ಆ ಮೂಲಭೂತ ಒಪ್ಪಂದವನ್ನು ಉಲ್ಲಂಘಿಸಿದಂತಾಗುತ್ತದೆ. ಈ ಕಾರಣದಿಂದ ನ್ಯಾಯ ಮತ್ತು ಭದ್ರತೆಯ ನಿರ್ವಹಣೆಯು ರಾಜ್ಯದ

ಅಸ್ತಿತ್ವದ ಅವಿಭಾಜ್ಯ ಅಂಗವಾಗಿದೆ. ಖಾಸಗಿ ಆಸ್ತಿಯ ರಕ್ಷಣೆ. ಸಮಾಜದಲ್ಲಿ ಸ್ವಾಮಿತ್ವದ ಪರಿಕಲ್ಪನೆ ಬೆಳೆಯುತ್ತಿದ್ದಂತೆ ಕಳ್ಳತನ, ಆಸ್ತಿ ವಿವಾದಗಳು ಮತ್ತು ಅನ್ಯಾಯದ ಸ್ವಾಧೀನದಂತಹ ಸಮಸ್ಯೆಗಳು ಕಾಣಿಸಿಕೊಂಡವು. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯ ಆಸ್ತಿ ಮತ್ತು ಸಂಪತ್ತನ್ನು ರಕ್ಷಿಸಲು ಒಂದು ಸಂಘಟಿತ ಆಡಳಿತ ವ್ಯವಸ್ಥೆಯ ಅಗತ್ಯ ಉಂಟಾಯಿತು. ಈ ದೃಷ್ಟಿಯಿಂದ ರಾಜ್ಯವು ಕೇವಲ ವ್ಯಕ್ತಿಯ ಆಸ್ತಿಯನ್ನು ಕಳ್ಳತನ ಅಥವಾ ದೌರ್ಜನ್ಯದಿಂದ ರಕ್ಷಿಸುವುದಷ್ಟೇ ಅಲ್ಲ, ಜನರು ನ್ಯಾಯಯುತವಾಗಿ ಸಂಪತ್ತನ್ನು ಸಂಪಾದಿಸಲು ಮತ್ತು ಅದನ್ನು ಸುರಕ್ಷಿತವಾಗಿ ಅನುಭವಿಸಲು ಅನುಕೂಲಕರ ಪರಿಸ್ಥಿತಿಗಳನ್ನು ನಿರ್ಮಿಸುವ ಜವಾಬ್ದಾರಿಯನ್ನೂ ಹೊಂದಿದೆ. ಆರ್ಥಿಕ ಚಟುವಟಿಕೆಗಳಿಗೆ ಭದ್ರತೆಯನ್ನು ಒದಗಿಸುವುದು, ಆಸ್ತಿ ಹಕ್ಕುಗಳನ್ನು ಕಾಪಾಡುವುದು ಮತ್ತು ಅನ್ಯಾಯದ ಶೋಷಣೆಯನ್ನು ತಡೆಯುವುದು ರಾಜ್ಯದ ಕರ್ತವ್ಯಗಳಾಗಿವೆ. ಆಸ್ತಿಯ ರಕ್ಷಣೆಯ ಉದ್ದೇಶವು ಕೇವಲ ಸಂಪತ್ತಿನ ಸಂಗ್ರಹಣೆಗೆ ಅವಕಾಶ ನೀಡುವುದಲ್ಲ; ಬದಲಾಗಿ ಸಮಾಜದಲ್ಲಿ ಸ್ಥಿರತೆ, ನ್ಯಾಯ ಮತ್ತು ಆರ್ಥಿಕ ಕಲ್ಯಾಣವನ್ನು ಉತ್ತೇಜಿಸುವುದಾಗಿದೆ.

ಆರ್ಥಿಕ ವ್ಯವಸ್ಥೆಯು ಜನಕಲ್ಯಾಣದ ಪ್ರಮುಖ ಸಾಧನವೆಂದು ಪರಿಗಣಿಸಲ್ಪಟ್ಟಿದೆ. ರಾಜ್ಯದ ಆರ್ಥಿಕ ನೀತಿಯು ಸಮಾಜದ ಸಮಗ್ರ ಅಭಿವೃದ್ಧಿ, ಉತ್ಪಾದನಾ ವೃದ್ಧಿ ಮತ್ತು ಜನರ ಜೀವನಮಟ್ಟದ ಸುಧಾರಣೆಯನ್ನು ಗುರಿಯಾಗಿಟ್ಟುಕೊಂಡಿರಬೇಕು. ಈ ಹಿನ್ನೆಲೆಯಲ್ಲಿ ಖಾಸಗಿ ಉದ್ಯಮ, ಶ್ರಮ ಮತ್ತು ಉತ್ಪಾದಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ರಾಜ್ಯದ ಕರ್ತವ್ಯವೆಂದು ಸೂಚಿಸುತ್ತದೆ. ವ್ಯಕ್ತಿಯ ಪರಿಶ್ರಮ, ಪ್ರಾಮಾಣಿಕ ಸಂಪಾದನೆ ಮತ್ತು ಉತ್ಪಾದಕ ಚಟುವಟಿಕೆಗಳಿಗೆ ಮಹತ್ವ ನೀಡುತ್ತದೆ. ಆದ್ದರಿಂದ ರಾಜ್ಯವು ಕೃಷಿ, ವ್ಯಾಪಾರ, ಕೈಗಾರಿಕೆ ಮತ್ತು ಇತರ ಆರ್ಥಿಕ ಚಟುವಟಿಕೆಗಳಿಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಬೇಕು. ಜನರು ತಮ್ಮ ಸಾಮರ್ಥ್ಯ ಮತ್ತು ಪರಿಶ್ರಮದ ಮೂಲಕ ಜೀವನೋಪಾಯವನ್ನು ಗಳಿಸಲು ಅವಕಾಶಗಳನ್ನು ಒದಗಿಸುವುದು ಉತ್ತಮ ಆಡಳಿತದ ಲಕ್ಷಣವಾಗಿದೆ.

ಸಮಾಜದಲ್ಲಿ ಕಂಡುಬರುವ ಅನೇಕ ಸಾಮಾಜಿಕ ಸಮಸ್ಯೆಗಳು ಮತ್ತು ದುರ್ಗುಣಗಳಿಗೆ ಬಡತನವೇ ಮೂಲ ಕಾರಣವಾಗಿದೆ. ದಾರಿದ್ರ್ಯವು ಕಳ್ಳತನ, ಹಿಂಸೆ, ಶೋಷಣೆ, ಅಸಮಾಧಾನ ಮತ್ತು ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದು. ಆದ್ದರಿಂದ ರಾಜ್ಯದ ಆರ್ಥಿಕ ನೀತಿಯ ಮುಖ್ಯ ಗುರಿಯು ಬಡತನವನ್ನು ಕಡಿಮೆ ಮಾಡುವುದು ಮತ್ತು ಜನರಿಗೆ ಗೌರವಯುತ ಜೀವನವನ್ನು ಒದಗಿಸುವುದಾಗಿರಬೇಕು. ಬುದ್ಧರು ಹಲವಾರು ಸಂದರ್ಭಗಳಲ್ಲಿ ಕೇವಲ ದಂಡನೆಗಳಿಂದ ಅಪರಾಧಗಳನ್ನು ತಡೆಯಲು ಸಾಧ್ಯವಿಲ್ಲ; ಜನರ ಆರ್ಥಿಕ ಸಂಕಷ್ಟಗಳನ್ನು ನಿವಾರಿಸುವುದರ ಮೂಲಕವೇ ಶಾಶ್ವತ ಶಾಂತಿಯನ್ನು ಸಾಧಿಸಬಹುದು ಎಂದು ಸೂಚಿಸಿದ್ದಾನೆ. ಈ ಕಾರಣದಿಂದ ಆರ್ಥಿಕ ನ್ಯಾಯ ಮತ್ತು ಸಾಮಾಜಿಕ ಭದ್ರತೆಗೆ ಬೌದ್ಧ ರಾಜಕೀಯ ಚಿಂತನೆ ವಿಶೇಷ ಪ್ರಾಮುಖ್ಯತೆಯನ್ನು ನೀಡುತ್ತದೆ.

ಉದ್ಯೋಗ ಮಾಡಲು ಸಮರ್ಥರಾಗಿರುವ ಎಲ್ಲರಿಗೂ ಜೀವನೋಪಾಯದ ಅವಕಾಶಗಳು ದೊರೆಯುವಂತಹ ಸಮಾಜವನ್ನು ನಿರ್ಮಿಸುವುದು ರಾಜ್ಯದ ಕರ್ತವ್ಯವಾಗಿದೆ. ಉದ್ಯೋಗವಿಲ್ಲದಿರುವುದು ಬಡತನ ಮತ್ತು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುವುದರಿಂದ, ರಾಜ್ಯವು ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ಸಾರ್ವಜನಿಕ ಯೋಜನೆಗಳ ಮೂಲಕ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಬೇಕು. ಸಕಮ್ಮಪಸುತ ಎಂಬ ಪರಿಕಲ್ಪನೆಯು ಜನರು ಉತ್ಪಾದಕ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಸ್ಥಿತಿಯನ್ನು ಸೂಚಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ದುಡಿಯಲು ಮತ್ತು ಆದಾಯ ಗಳಿಸಲು ಅವಕಾಶ ಹೊಂದಿರುವ ಸಮಾಜವೇ ಆರೋಗ್ಯಕರ ಮತ್ತು ಸ್ಥಿರ ಸಮಾಜವೆಂದು ಪರಿಗಣಿಸುತ್ತದೆ.

ಆರ್ಥಿಕ ಬೆಳವಣಿಗೆಯು ಕೇವಲ ಸಂಪತ್ತಿನ ಸಂಗ್ರಹಣೆಗೆ ಸೀಮಿತವಾಗಿರಬಾರದು. ಅದು ಸಮಾಜದ ಎಲ್ಲ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಬೇಕು. ನ್ಯಾಯಯುತ ಆದಾಯ ಹಂಚಿಕೆ, ಶ್ರಮಕ್ಕೆ ಗೌರವ, ಬಡವರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ ಆರ್ಥಿಕ ನೀತಿಯ ಪ್ರಮುಖ ಅಂಶಗಳಾಗಿರಬೇಕು. ಬೌದ್ಧ ರಾಜ್ಯ ಸಿದ್ಧಾಂತದಲ್ಲಿ ಆರ್ಥಿಕ ನೀತಿಯ ಮುಖ್ಯ ಉದ್ದೇಶವು ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ ಮತ್ತು ಜನರ ಆರ್ಥಿಕ ಕಲ್ಯಾಣವಾಗಿದೆ. ಖಾಸಗಿ ಉದ್ಯಮಕ್ಕೆ ಉತ್ತೇಜನ ನೀಡುವ ಜೊತೆಗೆ, ಪ್ರತಿಯೊಬ್ಬ ವ್ಯಕ್ತಿಗೂ ಜೀವನೋಪಾಯದ ಅವಕಾಶಗಳನ್ನು ಒದಗಿಸುವುದು ರಾಜ್ಯದ ಜವಾಬ್ದಾರಿಯಾಗಿದೆ. ಆರ್ಥಿಕ ನ್ಯಾಯ ಮತ್ತು ಉದ್ಯೋಗಾವಕಾಶಗಳು ಹೆಚ್ಚಾದಷ್ಟೂ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ನೈತಿಕತೆ ಬಲಗೊಳ್ಳುತ್ತವೆ. ನಿರುದ್ಯೋಗ ಮತ್ತು ಬಡತನವು ಸಮಾಜದ ಅನೇಕ ಸಮಸ್ಯೆಗಳ ಮೂಲ ಕಾರಣಗಳಾಗಿವೆ. ಆದ್ದರಿಂದ ರಾಜ್ಯವು ಕೇವಲ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಂಸ್ಥೆಯಾಗಿರದೆ, ಜನರಿಗೆ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಒದಗಿಸುವ ಕಲ್ಯಾಣಕಾರಿ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸಬೇಕು.

ರಾಜ್ಯವು ಕೃಷಿ, ವ್ಯಾಪಾರ, ಕೈಗಾರಿಕೆ ಮತ್ತು ಸರ್ಕಾರಿ ಸೇವೆಗಳ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ನಿರಂತರ ಪ್ರಯತ್ನ ಮಾಡಬೇಕು. ಉತ್ಪಾದಕ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದರ ಮೂಲಕ ನಿರುದ್ಯೋಗವನ್ನು ಕಡಿಮೆ ಮಾಡಬಹುದು. ದುಡಿಯಲು ಸಮರ್ಥರಾಗಿರುವ ಪ್ರತಿಯೊಬ್ಬ ವ್ಯಕ್ತಿಗೂ ಗೌರವಯುತ ಜೀವನೋಪಾಯದ ಅವಕಾಶ ದೊರೆಯುವಂತೆ ಮಾಡುವ ಜವಾಬ್ದಾರಿ ರಾಜ್ಯದ್ದಾಗಿದೆ. ಕೃಷಿ ಕ್ಷೇತ್ರದ ಅಭಿವೃದ್ಧಿ, ವ್ಯಾಪಾರದ ವಿಸ್ತರಣೆ, ಸಾರ್ವಜನಿಕ ಕಾಮಗಾರಿಗಳ ಅನುಷ್ಠಾನ ಮತ್ತು ಆಡಳಿತಾತ್ಮಕ ಸೇವೆಗಳ ಬಲವರ್ಧನೆಯ ಮೂಲಕ ಜನರಿಗೆ ಉದ್ಯೋಗ ಒದಗಿಸುವುದು ಬೌದ್ಧ ಆರ್ಥಿಕ ಚಿಂತನೆಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಬೌದ್ಧಧಮ್ಮವು ಕೇವಲ ಸಂಪತ್ತಿನ ರಕ್ಷಣೆಯನ್ನಷ್ಟೇ ಅಲ್ಲ, ಸಂಪತ್ತಿನ ಉತ್ಪಾದನೆ ಮತ್ತು ಅದರ ನ್ಯಾಯಯುತ ಹಂಚಿಕೆಯನ್ನು ಸಹ

ಮಹತ್ವಪೂರ್ಣವೆಂದು ಪರಿಗಣಿಸುತ್ತದೆ. ರಾಜ್ಯವು ಬಡ ಮತ್ತು ಹಿಂದುಳಿದ ವರ್ಗಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅವರಿಗೆ ಉತ್ಪಾದನಾ ಸಂಪನ್ಮೂಲಗಳು, ಉದ್ಯೋಗಾವಕಾಶಗಳು ಮತ್ತು ಜೀವನೋಪಾಯದ ಸಾಧನಗಳನ್ನು ಒದಗಿಸುವ ಮೂಲಕ ಸ್ವಾವಲಂಬನೆಯತ್ತ ಕೊಂಡೊಯ್ಯಬೇಕು. ಈ ದೃಷ್ಟಿಯಿಂದ, ಬಡತನ ನಿವಾರಣೆ ಕೇವಲ ದಾನಧರ್ಮದ ಮೂಲಕವಲ್ಲ; ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಆದಾಯ ಗಳಿಸುವ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಸಾಧಿಸಬೇಕಾದ ಗುರಿಯಾಗಿದೆ.

ಸಮಾಜದ ಸಂಪತ್ತು ಕೆಲವೇ ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕೃತವಾಗುವುದು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಆದ್ದರಿಂದ ಬೌದ್ಧ ಆರ್ಥಿಕ ನೀತಿಗಳನ್ನು ಅನುಸರಿಸುವ ರಾಜ್ಯದಲ್ಲಿ ಸಂಪತ್ತಿನ ಅತಿಯಾದ ಸಂಗ್ರಹಣೆ ಮತ್ತು ಶೋಷಣೆಗೆ ಅವಕಾಶ ಇರಬಾರದು. ಆರ್ಥಿಕ ಅಭಿವೃದ್ಧಿಯ ಫಲಗಳು ಸಮಾಜದ ವಿಶಾಲ ವರ್ಗಗಳಿಗೆ ತಲುಪುವಂತೆ ರಾಜ್ಯವು ಕ್ರಮಗಳನ್ನು ಕೈಗೊಳ್ಳಬೇಕು. ಈ ದೃಷ್ಟಿಕೋನವು ಸಮಾನ ಅವಕಾಶಗಳು, ಸಾಮಾಜಿಕ ನ್ಯಾಯ ಮತ್ತು ಜನಕಲ್ಯಾಣದ ತತ್ವಗಳನ್ನು ಬಲಪಡಿಸುತ್ತದೆ. ಆರ್ಥಿಕ ಚಟುವಟಿಕೆಗಳೂ ನೈತಿಕ ಮೌಲ್ಯಗಳ ವ್ಯಾಪ್ತಿಯಲ್ಲಿಯೇ ನಡೆಯಬೇಕು. ಮೋಸ, ವಂಚನೆ, ಶೋಷಣೆ, ಭ್ರಷ್ಟಾಚಾರ ಮತ್ತು ಇತರ ಅನೈತಿಕ ವಿಧಾನಗಳ ಮೂಲಕ ಗಳಿಸಿದ ಸಂಪತ್ತನ್ನು ಬೌದ್ಧಧಮ್ಮವು ಒಪ್ಪುವುದಿಲ್ಲ. ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಮಾನವೀಯ ಮೌಲ್ಯಗಳು ಮತ್ತು ನೈತಿಕ ತತ್ವಗಳನ್ನು ಉಲ್ಲಂಘಿಸುವುದು ಬೌದ್ಧ ದೃಷ್ಟಿಯಲ್ಲಿ ಅಸ್ವೀಕಾರಾರ್ಹವಾಗಿದೆ. ಸಮಾಜದ ಹಿತಕ್ಕೆ ವಿರುದ್ಧವಾಗಿ, ಅನ್ಯಾಯದ ಮೂಲಕ ಅಥವಾ ಇತರರ ಶೋಷಣೆಯ ಮೂಲಕ ಸಂಪತ್ತನ್ನು ಸಂಪಾದಿಸುವವರ ವಿರುದ್ಧ ರಾಜ್ಯವು ಕ್ರಮ ಕೈಗೊಳ್ಳಬೇಕು.

ರಾಜ್ಯದ ಕರ್ತವ್ಯವು ಕೇವಲ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದಲ್ಲ; ಆ ಬೆಳವಣಿಗೆಯು ನೈತಿಕತೆ ಮತ್ತು ನ್ಯಾಯದ ಮಿತಿಯೊಳಗೆ ನಡೆಯುವಂತೆ ನೋಡಿಕೊಳ್ಳುವುದಾಗಿದೆ. ಆದ್ದರಿಂದ ನೈತಿಕ ಮೌಲ್ಯಗಳನ್ನು ಉಲ್ಲಂಘಿಸಿ ಆರ್ಥಿಕ ಲಾಭ ಪಡೆಯುವವರನ್ನು ಶಿಕ್ಷಿಸುವ ಮತ್ತು ಸಾರ್ವಜನಿಕ ಹಿತವನ್ನು ಕಾಪಾಡುವ ಜವಾಬ್ದಾರಿ ರಾಜ್ಯಕ್ಕಿದೆ. ಆದರ್ಶ ಆರ್ಥಿಕ ವ್ಯವಸ್ಥೆಯು ಉದ್ಯೋಗ ಸೃಷ್ಟಿ, ಬಡತನ ನಿರ್ಮೂಲನೆ, ಸಂಪತ್ತಿನ ನ್ಯಾಯಯುತ ಹಂಚಿಕೆ ಮತ್ತು ನೈತಿಕ ಮೌಲ್ಯಗಳ ಸಂರಕ್ಷಣೆ ಎಂಬ ನಾಲ್ಕು ಸ್ತಂಭಗಳ ಮೇಲೆ ನಿಂತಿದೆ. ರಾಜ್ಯವು ಕೃಷಿ, ವ್ಯಾಪಾರ ಮತ್ತು ಸಾರ್ವಜನಿಕ ಸೇವೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರ ಜೀವನಮಟ್ಟವನ್ನು ಸುಧಾರಿಸಬೇಕು. ಜೊತೆಗೆ, ಆರ್ಥಿಕ ಪ್ರಗತಿಯು ನೈತಿಕತೆಯೊಂದಿಗೆ ಹೊಂದಾಣಿಕೆಯಾಗಿರುವುದನ್ನು ಖಚಿತಪಡಿಸಬೇಕು. ಆರ್ಥಿಕ ಅಭಿವೃದ್ಧಿ ಮತ್ತು ನೈತಿಕತೆಯ ನಡುವಿನ ಸಮತೋಲನವನ್ನು ಸಾಧಿಸುವ ಕಲ್ಯಾಣಕಾರಿ ರಾಜ್ಯದ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತದೆ. ಅಹಿಂಸೆ, ಕರುಣೆ ಮತ್ತು ಶಾಂತಿ ಪ್ರಮುಖವಾಗಿವೆ. ಆದ್ದರಿಂದ ಯುದ್ಧವನ್ನು ಮಾನವ ಸಮಾಜಕ್ಕೆ ಹಾನಿಕಾರಕವಾದ ಮತ್ತು ದುಃಖವನ್ನು ಉಂಟುಮಾಡುವ ಕ್ರಿಯೆಯಾಗಿ ಪರಿಗಣಿಸುತ್ತದೆ. ಯುದ್ಧವು ಜೀವಹಾನಿ, ಆರ್ಥಿಕ ನಾಶ, ಸಾಮಾಜಿಕ ಅಸ್ಥಿರತೆ ಮತ್ತು ನೈತಿಕ

ಅಧಃಪತನಕ್ಕೆ ಕಾರಣವಾಗುವುದರಿಂದ, ಅದನ್ನು ಸಾಧ್ಯವಾದಷ್ಟು ತಪ್ಪಿಸಬೇಕು ಎಂಬುದು ಬೌದ್ಧ ದೃಷ್ಟಿಕೋನವಾಗಿದೆ. ಆದಾಗ್ಯೂ, ಬೌದ್ಧ ರಾಜಕೀಯ ಚಿಂತನೆಯು ಕೇವಲ ಆದರ್ಶವಾದದ ಮಟ್ಟದಲ್ಲೇ ನಿಲ್ಲುವುದಿಲ್ಲ; ಅದು ರಾಜ್ಯದ ವಾಸ್ತವಿಕ ಅಗತ್ಯತೆಗಳನ್ನೂ ಗುರುತಿಸುತ್ತದೆ. ರಾಜ್ಯವು ತನ್ನ ಪ್ರಜೆಗಳ ಭದ್ರತೆ, ಸಾರ್ವಭೌಮತ್ವ ಮತ್ತು ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುವುದರಿಂದ, ಕೆಲವು ಸಂದರ್ಭಗಳಲ್ಲಿ ಸಂಘರ್ಷಗಳನ್ನು ಸಂಪೂರ್ಣವಾಗಿ ತಪ್ಪಿಸುವುದು ಸಾಧ್ಯವಾಗುವುದಿಲ್ಲ. ಬೌದ್ಧಧಮ್ಮವು ಆಕ್ರಮಣಕಾರಿ ಯುದ್ಧ, ವಿಸ್ತರಣಾವಾದ ಮತ್ತು ಅಧಿಕಾರದ ದುರಾಸೆಯಿಂದ ನಡೆಸುವ ಯುದ್ಧಗಳನ್ನು ಬೆಂಬಲಿಸುವುದಿಲ್ಲ. ದ್ವೇಷ, ಲೋಭ ಮತ್ತು ಅಹಂಕಾರದಿಂದ ಪ್ರೇರಿತವಾದ ಯುದ್ಧಗಳು ನೈತಿಕವಾಗಿ ಅಸಂಗತವಾಗಿವೆ. ಆದ್ದರಿಂದ ಶಾಂತಿಯುತ ಸಹಬಾಳ್ವೆ, ಸಂವಾದ, ರಾಜತಾಂತ್ರಿಕತೆ ಮತ್ತು ಪರಸ್ಪರ ಗೌರವದ ಮೂಲಕ ವಿವಾದಗಳನ್ನು ಪರಿಹರಿಸುವುದಕ್ಕೆ ಆದ್ಯತೆ ನೀಡಲಾಗಿದೆ.

ಬೌದ್ಧಧಮ್ಮವು ಅಹಿಂಸೆಯನ್ನು ಪ್ರತಿಪಾದಿಸಿದರೂ, ರಾಜ್ಯದ ರಕ್ಷಣೆಯ ಅಗತ್ಯತೆಯನ್ನು ನಿರಾಕರಿಸುವುದಿಲ್ಲ. ಬಾಹ್ಯ ಆಕ್ರಮಣ, ಪ್ರಜೆಗಳ ಜೀವಕ್ಕೆ ಅಪಾಯ ಅಥವಾ ರಾಜ್ಯದ ಅಸ್ತಿತ್ವಕ್ಕೆ ಧಕ್ಕೆ ಉಂಟಾದ ಸಂದರ್ಭದಲ್ಲಿ ರಾಜ್ಯವು ತನ್ನನ್ನು ತಾನು ರಕ್ಷಿಸಿಕೊಳ್ಳಲು ಕ್ರಮ ಕೈಗೊಳ್ಳಬಹುದು. ಈ ಅರ್ಥದಲ್ಲಿ ಯುದ್ಧವು ಮೊದಲ ಆಯ್ಕೆಯಾಗಿರಬಾರದು; ಅದು ಎಲ್ಲಾ ಶಾಂತಿಯುತ ಮಾರ್ಗಗಳು ವಿಫಲವಾದ ಅನಂತರ ಮಾತ್ರ ಅನುಸರಿಸಬಹುದಾದ ಕೊನೆಯ ಕ್ರಮವಾಗಿರಬೇಕು. ರಾಜ್ಯಕ್ಕೆ ಅಪರಾಧಿಗಳನ್ನು ಶಿಕ್ಷಿಸುವ ಅಧಿಕಾರವಿದೆ. ಈ ಅಧಿಕಾರದ ಉದ್ದೇಶ ಪ್ರತೀಕಾರವಲ್ಲ; ಸಮಾಜದ ರಕ್ಷಣೆ ಮತ್ತು ನ್ಯಾಯದ ಸ್ಥಾಪನೆಯಾಗಿದೆ. ಯುದ್ಧವೂ ದ್ವೇಷ ಅಥವಾ ವಿಜಯಾಕಾಂಕ್ಷೆಯಿಂದ ನಡೆಸಲ್ಪಡಬಾರದು; ಅದು ಜನರ ರಕ್ಷಣೆ ಮತ್ತು ಶಾಂತಿಯ ಪುನಃಸ್ಥಾಪನೆಗಾಗಿ ಮಾತ್ರ ಇರಬೇಕು. ಯುದ್ಧ ಅನಿವಾರ್ಯವಾದರೂ, ಬೌದ್ಧಧಮ್ಮವು ಅದರ ಮೇಲೆ ನೈತಿಕ ನಿಯಂತ್ರಣಗಳನ್ನು ಕ್ರಮಬದ್ಧಗೊಳಿಸುತ್ತದೆ. ಅನಗತ್ಯ ಹಿಂಸೆ, ನಿರಪರಾಧಿಗಳ ಹತ್ಯೆ, ಕ್ರೌರ್ಯ ಮತ್ತು ವಿನಾಶವನ್ನು ತಪ್ಪಿಸಬೇಕು. ಯುದ್ಧದ ಗುರಿಯು ಶಾಂತಿಯನ್ನು ಪುನಃಸ್ಥಾಪಿಸುವುದಾಗಿರಬೇಕು; ಪ್ರತೀಕಾರ ಅಥವಾ ವಿಸ್ತರಣಾವಾದವಲ್ಲ.

ಬೌದ್ಧಧಮ್ಮವು ಮೂಲತಃ ಅಹಿಂಸೆ, ಕರುಣೆ ಮತ್ತು ಶಾಂತಿಯ ಮೌಲ್ಯಗಳನ್ನು ಪ್ರತಿಪಾದಿಸಿದರೂ, ರಾಜ್ಯದ ಅಸ್ತಿತ್ವ ಮತ್ತು ಜನರ ಭದ್ರತೆಯನ್ನು ಕಾಪಾಡುವ ಅಗತ್ಯವನ್ನು ನಿರ್ಲಕ್ಷಿಸುವುದಿಲ್ಲ. ಈ ಕಾರಣದಿಂದಲೇ ಆಕ್ರಮಣಕಾರಿ ಯುದ್ಧವನ್ನು ವಿರೋಧಿಸುತ್ತದೆ. ಆದರೆ ರಕ್ಷಣಾತ್ಮಕ ಯುದ್ಧವನ್ನು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಸಮರ್ಥನೀಯವೆಂದು ಪರಿಗಣಿಸುತ್ತದೆ. ರಾಜ್ಯದ ಸಾರ್ವಭೌಮತ್ವಕ್ಕೆ, ಪ್ರಜೆಗಳ ಜೀವಕ್ಕೆ ಅಥವಾ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗೆ ಅಪಾಯ

ಎದುರಾದಾಗ, ಅವುಗಳನ್ನು ರಕ್ಷಿಸಲು ರಾಜ್ಯವು ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು. ಈ ಸಂದರ್ಭದಲ್ಲಿ ಯುದ್ಧವು ವಿಜಯ, ವಿಸ್ತರಣೆ ಅಥವಾ ಪ್ರತೀಕಾರದ ಸಾಧನವಾಗಿರದೆ, ರಕ್ಷಣೆ ಮತ್ತು ಭದ್ರತೆಯ ಸಾಧನವಾಗಿರುತ್ತದೆ. ಆದ್ದರಿಂದ ದೇಶದ ಜನರು, ರಾಜ್ಯದ ಆಸ್ತಿ, ಸಾರ್ವಜನಿಕ ಸಂಪನ್ಮೂಲಗಳು ಮತ್ತು ನಾಗರಿಕರ ಖಾಸಗಿ ಆಸ್ತಿಯನ್ನು ರಕ್ಷಿಸುವ ಉದ್ದೇಶದಿಂದ ಯುದ್ಧವನ್ನು ಕೈಗೊಳ್ಳಲು ರಾಜ್ಯಕ್ಕೆ ಅವಕಾಶ ನೀಡುತ್ತದೆ. ಆದಾಗ್ಯೂ, ಇಂತಹ ಯುದ್ಧವು ಕೆಲವು ನೈತಿಕ ಮಿತಿಗಳಿಗೆ ಒಳಪಟ್ಟಿರಬೇಕು; ಯುದ್ಧವು ಸ್ವರಕ್ಷಣೆಯ ಉದ್ದೇಶವನ್ನು ಮಾತ್ರ ಹೊಂದಿರಬೇಕು. ಶಾಂತಿಯುತ ಪರಿಹಾರದ ಎಲ್ಲ ಮಾರ್ಗಗಳನ್ನು ಮೊದಲು ಪ್ರಯತ್ನಿಸಬೇಕು. ಅನಗತ್ಯ ಹಿಂಸೆ ಮತ್ತು ವಿನಾಶವನ್ನು ತಪ್ಪಿಸಬೇಕು. ನಿರಪರಾಧ ಜನರ ರಕ್ಷಣೆಗೆ ಆದ್ಯತೆ ನೀಡಬೇಕು. ಅಂತಿಮ ಗುರಿಯು ಶಾಂತಿ ಮತ್ತು ಸುವ್ಯವಸ್ಥೆಯ ಪುನಃಸ್ಥಾಪನೆಯಾಗಿರಬೇಕು.

ದೇಶದ ರಕ್ಷಣೆಗಾಗಿ ನಡೆಸುವ ಯುದ್ಧವು ನೈತಿಕವಾಗಿ ಸಮರ್ಥನೀಯವಾಗಬಹುದು, ಆದರೆ ಅದು ಆಕ್ರಮಣ, ಪ್ರಭುತ್ವ ಸ್ಥಾಪನೆ ಅಥವಾ ದುರಾಸೆಯ ಉದ್ದೇಶದಿಂದ ನಡೆಸಲ್ಪಡಬಾರದು. ಜನರು, ರಾಜ್ಯ ಮತ್ತು ಆಸ್ತಿಯ ರಕ್ಷಣೆಯೇ ಅದರ ಏಕೈಕ ನ್ಯಾಯಸಮ್ಮತ ಆಧಾರವಾಗಿರಬೇಕು. ಶಾಂತಿ ಮತ್ತು ಅಹಿಂಸೆಯನ್ನು ಪ್ರತಿಪಾದಿಸಿದರೂ, ರಾಜ್ಯದ ಕಾರ್ಯನಿರ್ವಹಣೆಗೆ ಅಗತ್ಯವಾದ ವಾಸ್ತವಿಕ ಅಂಶಗಳನ್ನು ಸಹ ಗುರುತಿಸುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ರಾಜ್ಯವು ತನ್ನ ಸಾರ್ವಭೌಮತ್ವ, ಭದ್ರತೆ ಮತ್ತು ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಸಶಸ್ತ್ರ ಬಲವನ್ನು ಹೊಂದಿರಬೇಕೆಂಬುದನ್ನು ಅಂಗೀಕರಿಸುತ್ತದೆ. ಸಶಸ್ತ್ರ ಪಡೆಗಳು ರಾಜ್ಯದ ಅಧಿಕಾರದ ಒಂದು ಅವಿಭಾಜ್ಯ ಅಂಗವಾಗಿದ್ದು, ಅವುಗಳ ಪ್ರಮುಖ ಕರ್ತವ್ಯವು ರಾಜ್ಯವನ್ನು ಬಾಹ್ಯ ಆಕ್ರಮಣಗಳಿಂದ ರಕ್ಷಿಸುವುದು ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಯುದ್ಧಭೂಮಿಯಲ್ಲಿ ದೇಶರಕ್ಷಣೆಯ ಹೊಣೆಗಾರಿಕೆಯನ್ನು ನಿರ್ವಹಿಸುವುದಾಗಿದೆ. ಆದಾಗ್ಯೂ, ಸೈನಿಕ ಶಕ್ತಿಯ ಉದ್ದೇಶವು ಯುದ್ಧಪ್ರಿಯತೆ ಅಥವಾ ವಿಸ್ತರಣಾವಾದವಲ್ಲ. ಬದಲಾಗಿ, ಅದು ಶಾಂತಿ, ಭದ್ರತೆ ಮತ್ತು ನ್ಯಾಯವನ್ನು ಕಾಪಾಡುವ ಸಾಧನವಾಗಿದೆ. ಯುದ್ಧವನ್ನು ಬೌದ್ಧಧಮ್ಮವು ಸಾಮಾನ್ಯ ಅಥವಾ ಅಪೇಕ್ಷಣೀಯ ಸ್ಥಿತಿಯಾಗಿ ಪರಿಗಣಿಸುವುದಿಲ್ಲ; ಆದರೆ ರಾಜ್ಯದ ಅಸ್ತಿತ್ವ, ಪ್ರಜೆಗಳ ಸುರಕ್ಷತೆ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸಲು ಅದು ಕೆಲವೊಮ್ಮೆ ಅನಿವಾರ್ಯವಾಗಬಹುದು ಎಂಬುದನ್ನು ಒಪ್ಪಿಕೊಳ್ಳುತ್ತದೆ. ಈ ದೃಷ್ಟಿಕೋನವು ಚಕ್ರವರ್ತಿ ರಾಜನ ಪರಿಕಲ್ಪನೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಚಕ್ರವರ್ತಿ ರಾಜನು ಧರ್ಮದ ಆಧಾರದ ಮೇಲೆ ಆಡಳಿತ ನಡೆಸುವ ಆದರ್ಶ ರಾಜನಾಗಿದ್ದರೂ, ತನ್ನ ರಾಜ್ಯದ ಏಕತೆ, ಭದ್ರತೆ ಮತ್ತು ಸ್ಥಿರತೆಯನ್ನು ಕಾಪಾಡುವ ಜವಾಬ್ದಾರಿಯನ್ನೂ ಹೊಂದಿರುತ್ತಾನೆ. ಅವನ ಆಡಳಿತದಲ್ಲಿ ಶಾಂತಿ ಮತ್ತು ಕಲ್ಯಾಣಕ್ಕೆ ಆದ್ಯತೆ ನೀಡಲಾಗುತ್ತದೆ; ಆದರೆ ರಾಜ್ಯರಕ್ಷಣೆಗೆ ಅಗತ್ಯವಾದ ಶಕ್ತಿಯನ್ನೂ ನಿರ್ಲಕ್ಷಿಸಲಾಗುವುದಿಲ್ಲ. ಅದೇ ರೀತಿ, ಬೌದ್ಧಧಮ್ಮದಲ್ಲಿ ರಾಜ್ಯದ ಕಲ್ಯಾಣ ಮತ್ತು ಅಭಿವೃದ್ಧಿಗೆ ಅಗತ್ಯವಾಗಿ ರಾಜ್ಯದ ಸಂಘಟನೆ, ಏಕತೆ, ಶಿಸ್ತು ಮತ್ತು ಭದ್ರತೆಯ ಮಹತ್ವವನ್ನು ಒತ್ತಿಹೇಳಲಾಗಿದೆ.

ಒಂದು ರಾಜ್ಯವು ತನ್ನ ರಾಜಕೀಯ ಸ್ಥಿರತೆ, ಸಾಮಾಜಿಕ ಏಕತೆ ಮತ್ತು ರಕ್ಷಣಾ ಸಾಮರ್ಥ್ಯವನ್ನು ಕಾಪಾಡಿಕೊಂಡಾಗ ಮಾತ್ರ ಜನರ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬ ಸಂದೇಶವನ್ನು ಈ ಬೋಧನೆಗಳು ನೀಡುತ್ತವೆ. ಯುದ್ಧವನ್ನು ಮಹಿಮೆಪಡಿಸುವುದಿಲ್ಲ; ಆದರೆ ರಾಜ್ಯದ ರಕ್ಷಣೆಗಾಗಿ ಸಶಸ್ತ್ರ ಪಡೆಗಳ ಅಗತ್ಯತೆಯನ್ನು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಯುದ್ಧದ ಸಂಭವನೀಯತೆಯನ್ನು ಒಪ್ಪಿಕೊಳ್ಳುತ್ತದೆ. ಚಕ್ರವರ್ತಿ ರಾಜನ ಆದರ್ಶ ಮತ್ತು ರಾಜ್ಯದ ಕಲ್ಯಾಣಕ್ಕೆ ಸಂಬಂಧಿಸಿದ ಬೋಧನೆಗಳ ಮೂಲಕ ಶಾಂತಿ ಮತ್ತು ಶಕ್ತಿಯ ನಡುವಿನ ಸಮತೋಲನವನ್ನು ಪ್ರತಿಪಾದಿಸುತ್ತದೆ. ಸಶಸ್ತ್ರದ ಬಲವು ಯುದ್ಧಕ್ಕಾಗಿ ಅಲ್ಲ, ಶಾಂತಿ, ಭದ್ರತೆ ಮತ್ತು ಜನಕಲ್ಯಾಣವನ್ನು ಕಾಪಾಡುವ ಸಾಧನವಾಗಿರಬೇಕು.

ನಿರಂಕುಶ ಅಥವಾ ಸರ್ವಾಧಿಕಾರಿ ಆಡಳಿತವನ್ನು ಅಂಗೀಕರಿಸುವುದಿಲ್ಲ. ರಾಜ್ಯದ ಅಧಿಕಾರವು ಸ್ವತಃ ತನ್ನಲ್ಲೇ ಅಂತಿಮವಲ್ಲ; ಅದು ಜನರ ಹಿತಾಸಕ್ತಿ, ನೈತಿಕತೆ ಮತ್ತು ಧರ್ಮದ ಮಿತಿಗಳೊಳಗೆ ಕಾರ್ಯನಿರ್ವಹಿಸಬೇಕು. ಈ ಕಾರಣದಿಂದಲೇ ರಾಜ್ಯಾಧಿಕಾರದ ಮೇಲೆ ನಿಯಂತ್ರಣಗಳನ್ನು ಕ್ರಮಬದ್ಧಗೊಳಿಸುವ ಮತ್ತು ಜನರ ಹಕ್ಕುಗಳನ್ನು ರಕ್ಷಿಸುವ ವಿವಿಧ ತತ್ವಗಳನ್ನು ಪ್ರತಿಪಾದಿಸುತ್ತದೆ. ಆಡಳಿತದ ನ್ಯಾಯಸಮ್ಮತತೆಯು ಜನರ ಸಮ್ಮತಿಯಿಂದ ಉದ್ಭವಿಸುತ್ತದೆ. ಮಹಾಸಮ್ಮತ ಪರಿಕಲ್ಪನೆಯು ರಾಜನ ಅಧಿಕಾರವು ಜನರ ಅಂಗೀಕಾರದಿಂದ ಬಂದಿದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಆಡಳಿತಗಾರನು ಜನರ ಸೇವಕನಾಗಿದ್ದು, ಅವರ ಕಲ್ಯಾಣಕ್ಕಾಗಿ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಬೌದ್ಧಧಮ್ಮದಲ್ಲಿ ರಾಜ್ಯದ ಅಧಿಕಾರಕ್ಕಿಂತ ಮೇಲಿರುವುದು ಧಮ್ಮ ಮತ್ತು ಸದಾಚಾರ. ರಾಜನು ಎಷ್ಟೇ ಶಕ್ತಿಶಾಲಿಯಾಗಿದ್ದರೂ, ಧರ್ಮ ಮತ್ತು ನ್ಯಾಯದ ಮಿತಿಗಳನ್ನು ಮೀರಿ ನಡೆಯಲು ಅವನಿಗೆ ಹಕ್ಕಿಲ್ಲ. ಈ ತತ್ವವು ಆಡಳಿತಗಾರನ ಅಧಿಕಾರವನ್ನು ನೈತಿಕತೆಯ ಮೂಲಕ ನಿಯಂತ್ರಿಸುತ್ತದೆ. ಚಕ್ರವರ್ತಿ ರಾಜನು ಭೂಮಿಯ ಮೇಲಿನ ಅತ್ಯಂತ ಶಕ್ತಿಶಾಲಿ ಆಡಳಿತಗಾರನಾಗಿದ್ದರೂ, ಅವನೂ ಧರ್ಮದ ಅಧೀನದಲ್ಲಿಯೇ ಆಡಳಿತ ನಡೆಸಬೇಕು. ಈ ಕಾರಣದಿಂದಲೇ ಆಡಳಿತಗಾರನ ಇಚ್ಛೆಯೇ ಕಾನೂನು ಅಲ್ಲ; ಬದಲಾಗಿ ಧರ್ಮ ಮತ್ತು ನ್ಯಾಯವೇ ಆಡಳಿತದ ಆಧಾರವಾಗಿವೆ.

ಆಧುನಿಕ ರಾಜಕೀಯ ಭಾಷೆಯಲ್ಲಿ ಹೇಳುವುದಾದರೆ, ಬೌದ್ಧಧಮ್ಮವು ಕಾನೂನಿನ ಪ್ರಭುತ್ವ ಎಂಬ ತತ್ವವನ್ನು ಪ್ರತಿಪಾದಿಸುತ್ತದೆ. ಅಂದರೆ: ಕಾನೂನು ಎಲ್ಲರಿಗಿಂತ ಮೇಲಿರುತ್ತದೆ. ಆಡಳಿತಗಾರನೂ ಕಾನೂನಿನ ಅಧೀನದಲ್ಲಿರುತ್ತಾನೆ. ಅಧಿಕಾರವು ಕಾನೂನಿನ ಮಿತಿಗಳೊಳಗೆ ಮಾತ್ರ ಚಲಾಯಿಸಬೇಕು. ವೈಯಕ್ತಿಕ ಇಚ್ಛೆ ಅಥವಾ ಸ್ವೇಚ್ಛಾಚಾರಕ್ಕೆ ಅವಕಾಶವಿರುವುದಿಲ್ಲ. ಈ ದೃಷ್ಟಿಯಿಂದ ರಾಜನಿಗೆ ಅಥವಾ ರಾಜ್ಯಕ್ಕೆ ಕಾನೂನನ್ನು ಮೀರಿ ನಡೆಯುವ ಹಕ್ಕಿಲ್ಲ. ಜನರು ಮತ್ತು ಆಡಳಿತಗಾರನ ನಡುವಿನ ಸಾಮಾಜಿಕ ಒಪ್ಪಂದವು ರಾಜ್ಯದ ಅಧಿಕಾರಕ್ಕೆ ಸ್ಪಷ್ಟ ಮಿತಿಗಳನ್ನು ಕ್ರಮಬದ್ಧಗೊಳಿಸುತ್ತದೆ. ಜನರು ರಾಜ್ಯಕ್ಕೆ ಅಧಿಕಾರವನ್ನು ನೀಡಿದ್ದು ಅವರ ಭದ್ರತೆ, ನ್ಯಾಯ ಮತ್ತು ಕಲ್ಯಾಣವನ್ನು ಕಾಪಾಡಲು ಮಾತ್ರ. ಆದ್ದರಿಂದ

ಈ ಉದ್ದೇಶಗಳನ್ನು ಉಲ್ಲಂಘಿಸುವ ಯಾವುದೇ ಆಡಳಿತವು ತನ್ನ ನೈತಿಕ ನ್ಯಾಯಸಮ್ಮತತೆಯನ್ನು ಕಳೆದುಕೊಳ್ಳುತ್ತದೆ.

ರಾಜ್ಯವು ಸಮಾಜದಲ್ಲಿ ಸ್ಥಾಪಿತವಾಗಿರುವ ಸಂಪ್ರದಾಯಗಳು, ನೈತಿಕ ತತ್ವಗಳು, ನ್ಯಾಯಯುತ ಕ್ರಮಗಳು ಮತ್ತು ಆಚರಣೆಗಳು, ಸಮಾಜದ ರೂಢಿ–ರಿವಾಜುಗಳು, ಮಾನವೀಯ ಮೌಲ್ಯಗಳು, ಧರ್ಮ ಮತ್ತು ಸದಾಚಾರದಂತಹ ಮೌಲ್ಯಗಳನ್ನು ಗೌರವಿಸಬೇಕು. ಈ ಮೌಲ್ಯಗಳನ್ನು ಉಲ್ಲಂಘಿಸಿ ಅಧಿಕಾರವನ್ನು ಚಲಾಯಿಸುವುದು ಧರ್ಮರಾಜ್ಯದ ತತ್ವಗಳಿಗೆ ವಿರುದ್ಧವಾಗಿದೆ. ಬೌದ್ಧಧಮ್ಮದಲ್ಲಿ ರಾಜನಿಗೆ ವ್ಯಾಪಕ ಅಧಿಕಾರಗಳನ್ನು ನೀಡಲಾಗಿದ್ದರೂ, ಆ ಅಧಿಕಾರಗಳು ಧರ್ಮ, ನೈತಿಕತೆ ಮತ್ತು ಕಾನೂನಿನ ನಿಯಂತ್ರಣದಲ್ಲಿರುತ್ತವೆ.

## ಗ್ರಂಥಸೂಚಿ


- Ambedkar.B.R, *The Buddha and His Dhamma*. Mumbai, 1957.
- Aṅguttara Nikāya. Bhikkhu Bodhi (Trans.). *The Numerical Discourses of the Buddha*. Boston, 2012.
- Beni Prasad, *The Evolution of Political Thought in India*, Allahabad, 1961
- Dīgha Nikāya, Boston, 1995.
- Edward J. Thomas, *History of Buddhist Thought*, London, 1933.
- Matthew J.Moore, *Buddhism and Political Theory*, Oxford, 2016.
- Mukulika Banerjee, *Buddhist Political Theory*, London, 2011
- Peter Harvey, *An Introduction to Buddhist Ethics*, Cambridge, 2000.
- Sarao.K.T.S, *The Wheel of Dhamma: Essays on Buddhism and Society*, Delhi, 2000.
- Maurice Walshe (Trans), The Long Discourses of the Buddha, Boston, 1995.